ಉತ್ಪನ್ನ ಸಂಖ್ಯೆ ಸಿ.ಎಚ್. ಐ.ಆರ್.ಪಿ -೫೦೮೯೩- ಸಿಎ, ಆವೃತ್ತಿ: ೫ಜನವರಿ, ೨೦೨೪

CHIRP
CASE HOUSE OF IIM RAIPUR

**ಸಿ.ಎಚ್. ಐ.ಆರ್.ಪಿ- ಐ.ಐ.ಎಂ ರಾಯಪುರ್‌ನ ಪ್ರಕರಣಗೂಡು**

ಪ್ರಕರಣ | ಹತ್ತು ನಿಮಿಷಗಳ ಓದು | 14 ಪುಟಗಳು

# ಹೋಟಲ್ ಉದ್ಯಮದಲ್ಲಿರುವ ತಾರತಮ್ಯ ಮತ್ತು ಸಾಮರ್ಥ್ಯ ಹಂಚಿಕೆ

ಮೋಹಿತ್ ಗೋಸ್ವಾಮಿ[1], ರಾಮಕುಮಾರ್ ಎಂ.[1]

ಭಾಷಾಂತರ: ತಾರಕೇಶ್ವರ್ ವಿ.ಬಿ.[2]

[1] ಕಾರ್ಯಾಚರಣೆ ಮತ್ತು ಪರಿಮಾಣಾತ್ಮಕ ವಿಧಾನಗಳ ಕ್ಷೇತ್ರ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾನೇಜ್‌ಮೆಂಟ್-ರಾಯಪುರ್, ಭಾರತ

2 ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ, ಇಂಗ್ಲಿಶ ಅಂಡ್ ಫಾರಿನ್ ಲ್ಯಾಂಗ್ವೇಜಸ್ ಯೂನಿವರ್ಸಿಟಿ, ಹೈದರಾಬಾದ್, ಭಾರತ

ಈ ಬರಹವು ತರಗತಿಯ ಆಚೆಗೆ ಸಾಮಗ್ರಿ ಒದಗಿಸುವ ಉದ್ದೇಶವನ್ನು ಮಾತ್ರಹೊಂದಿದೆ. ನಿರ್ವಹಣೆಯ ಸಂದರ್ಭವನ್ನು ಸಮರ್ಥ ಅಥವಾ ಅಸಮರ್ಥವೆಂದು ನಿರೂಪಿಸುವ ಇರಾದೆ ಲೇಖಕರಿಗಿಲ್ಲ. ಗೌಪ್ಯತೆಯನ್ನು ಕಾಪಾಡುವುದಕ್ಕಾಗಿ ಗುರುತನ್ನು ಬಿಟ್ಟುಕೊಡಬಹುದಾದ ಹೆಸರು ಮುಂತಾದಮಾಹಿತಿಯನ್ನು ಲೇಖಕರು ಮರೆಮಾಚಿರಬಹುದು. ಈ ಪ್ರಕಟಣೆಯನ್ನು ಪ್ರಸರಿಸುವುದಾಗಲಿ, ನೆರಳಚ್ಚು ತೆಗೆಯುವುದಾಗಲಿ ಅಥವಾ ಬೇರೆ ಯಾವುದೇ ರೂಪದಲ್ಲಿ ಮರುಉತ್ಪಾದಿಸುವುದಾಗಲಿ (ಡಿಜಿಟಲ್ಲೂಪವನ್ನೂಸೇರಿಸಿ) ಹಕ್ಕುಸ್ವಾಮ್ಯ ಹೊಂದಿದವರ ಅನುಮತಿಯಿಲ್ಲದೆ ಮಾಡುವಂತಿಲ್ಲ. ಹಕ್ಕುಸ್ವಾಮ್ಯ © 2023, Indian Institute of Management Raipur, ಆವೃತ್ತಿ: ೫ ಜನವರಿ, ೨೦೨೪

**ಸಾರಲೇಖ**

ಇಂಜಿನಿಯರಿಂಗ್ ನಿರ್ವಹಣೆ ವೃತ್ತಿಯ ವಿವಿಧ ಹುದ್ದೆಗಳನ್ನು ಭಾರತೀಯ ಬ್ಲೂಚಿಪ್ (ಶೇರುಮಾರುಕಟ್ಟೆಯಲ್ಲಿ ಸದಾ ಚೆನ್ನಾಗಿ ಪ್ರವರ್ತಿಸುವ) ಉದ್ದಿಮೆಗಳಲ್ಲಿ ಯಶಸ್ವಿಯಾಗಿ ನಿಭಾಯಿಸಿ ಈಗ ಹೋಟೆಲ್ ಉದ್ಯಮಕ್ಕೆ ಕಾಲಿಟ್ಟು ತಾನು ಈಚೆಗೆ ಕೊಂಡುಕೊಂಡಿರುವ ಜಮೀನನ್ನು ವಿಶ್ವದರ್ಜೆಯ ಗುಣಮಟ್ಟದ ಪಂಚತಾರಾ ಹೋಟೆಲ್ ಆಗಿ ಪರಿವರ್ತಿಸಲು ರಜತ್ ಶರ್ಮ ಇಚ್ಛೆಸಿದ್ದಾರೆ. ಮಧ್ಯಭಾರತದಲ್ಲಿರುವ 500 ಕೊಠಡಿಗಳ ಈ ಹೋಟೆಲ್ 2024ರ ಮಾರ್ಚ್ ಹೊತ್ತಿಗೆ ಕಾರ್ಯಾರಂಭ ಮಾಡಬಹುದೆಂದು ಆಪೇಕ್ಷಿಸಲಾಗಿದೆ. ಹೋಟೆಲ್ ಉದ್ಯಮವು, ಅದರಲ್ಲೂ ಮುಖ್ಯವಾಗಿ ಪಂಚತಾರಾ ಮತ್ತು ಅದರ ಮೇಲಿನ ಸ್ತರದ ಹೋಟೆಲ್‌ಗಳ ವಲಯವು, ಬಹಳ ಸ್ಪರ್ಧಾತ್ಮಕವಾಗಿದ್ದು ಅದರಲ್ಲಿ ದರ ತಾರತಮ್ಯವು ಹೋಟೆಲ್‌ನ ಆದಾಯವನ್ನು ಹೆಚ್ಚಿಸುವಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆಯೆಂದು ರಜತ್‌ಗೆ ತಿಳಿದಿದೆ. ರಜತ್ ನಡೆಸಿದ ಮಾರುಕಟ್ಟೆ ಸಮೀಕ್ಷೆಯಲ್ಲಿ ಈ ವಲಯದ ಬಹುತೇಕ ಗ್ರಾಹಕರು ಕಾರ್ಪೊರೇಟ್ ವಲಯದ ಪ್ರಯಾಣಿಕರು, ಉದ್ದಿಮೆಗಳ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗಳಲ್ಲಿರುವವರು, ಅಥವಾ ಯಶಸ್ವಿ ಹೊಸ ಉದ್ದಿಮೆಗಳ ಸ್ಥಾಪಕರಾಗಿರುತ್ತಾರೆಂದು ತಿಳಿದುಬಂತು. ನಿರ್ದಿಷ್ಟ ಗ್ರಾಹಕರು ತಾವು ಕಾಯ್ದಿರಿಸುವ ಕೊಠಡಿಗೆ ರಾತ್ರಿಯೊಂದರ ತಂಗುವಿಕೆಗೆ ನೀಡಲಿಚ್ಛಿಸುವದರವು ಅವರು ಯಾವಾಗ ಮುಂಗಡ ಕಾಯ್ದಿರಿಸುತ್ತಾರೆ ಎಂಬುದನ್ನು ಅವಲಂಬಿಸಿದೆ ಎಂದೂ ಗೊತ್ತಾಯಿತು. ವಿಶೇಷವಾಗಿ ಎರಡು ರೀತಿಯ ಗ್ರಾಹಕರ ಗುಂಪನ್ನು ನೋಡಬಹುದು. ಮೊದಲನೆಯ ಗುಂಪು ಉಳಿದುಕೊಳ್ಳುವ ಸಮಯದಲ್ಲಿ ಹೋಟೆಲ್‌ಗೆ ಬಂದು ಕೊಠಡಿಯನ್ನು ಪಡೆಯುತ್ತಾರೆ ಅಥವಾ ಉಳಿದುಕೊಳ್ಳುವ ದಿನಕ್ಕಿಂತ ಏಳುದಿನಗಳ ಒಳಗೆ ಮುಂಗಡವಾಗಿ ಕೊಠಡಿ ಕಾಯ್ದಿರಿಸುತ್ತಾರೆ. ಎರಡನೆಯ ಗುಂಪು, ಉಳಿದುಕೊಳ್ಳುವುದಕ್ಕೆಏಳುದಿನಗಳ ಮೊದಲೇ ಕೊಠಡಿಯನ್ನು ಕಾಯ್ದಿರಿಸುತ್ತಾರೆ. ಮುಂಗಡ

ಕಾಯ್ದಿರಿಸುವಿಕೆಯನ್ನು ಉಳಿದುಕೊಳ್ಳುವದಿನಕ್ಕಿಂತ ತೊಂಭತ್ತು ದಿನಗಳ ಮೊದಲೇ ಕಾಯ್ದಿರಿಸುವ ಅವಕಾಶವನ್ನು ಗ್ರಾಹಕರಿಗೆ ನೀಡಲು ಆರಂಭಿಸಲಿರುವ ಹೋಟೆಲ್ ಯೋಜಿಸಿದೆ. ಇದಲ್ಲದೆ, ತಾರತಮ್ಯವನ್ನು ಉತ್ತಮಗೊಳಿಸಲು ರಜತ್ ಕಾಯ್ದಿರಿಸುವಿಕೆ ರದ್ದಾದರೆ ಹಿಂತಿರುಗಿಸಬೇಕಾದ ಮುಂಗಡ ಹಣದ ನೀತಿಯನ್ನೂ ಅದರಲ್ಲಿ ಒಂದು ಅಂಶವಾಗಿ ಪರಿಗಣಿಸಲು ಉದ್ದೇಶಿಸಿದ್ದಾರೆ.

---

ಸಂಬಂಧಿಸಿದ ಉತ್ಪನ್ನಗಳು

*ಪಾಠಮಾಡುವ ಟಿಪ್ಪಣಿ:* ಉತ್ಪನ್ನ ಸಂಖ್ಯೆ ಸಿ.ಎಚ್. ಐ.ಆರ್.ಪಿ -೫೦೮೯೩-TN